

# ಕಸ್ತೂರ್‌ಬಾ v/s ಗಾಂಧಿ



■ ಬರಗೂರು ರಾಮಚಂದ್ರಪ್ಪ

ಕಲೆ: ಮನೋಹರ ಕೆ. ಆಚಾರ್ಯ

## ಸಂಬಂಧಗಳ ಸಂಘರ್ಷ, ವ್ಯಕ್ತಿತ್ವದ ಉತ್ಕರ್ಷ

ಅತಿಥಿಯ ಮಲಮೂತ್ರದ ಕೊಡ ಚೊಕ್ಕಟ ಮಾಡಬೇಕೆಂದು ಗಾಂಧಿ ಆಗ್ರಹಿಸಿದಾಗ,'ಸೇವೇನ ಸರ್ವಾಧಿಕಾರ ಮಾಡ್‌ಬೇಡಿ' ಎಂದು ಕಸ್ತೂರ್ ಮರುನುಡಿಯಾಡಿದರು.

'ಕಸ್ತೂರ್!' – ಗಾಂಧಿ ಹಲ್ಲು ಕಚ್ಚಿ ಕೆರಳಿದರು.

'ಹೌದು; ಸೇವೆ ಅನ್ನೋದು ಸ್ವಯಂ ಮಾಡೋ ಕೆಲ್ಸ. ಸರ್ವಾಧಿಕಾರದಿಂದ ಮಾಡ್ಸೋ ಕೆಲ್ಸ ಅಲ್ಲ.'

'ಸೇವೆ–ಸರ್ವಾಧಿಕಾರದ ವ್ಯತ್ಯಾಸ ನಂಗೊತ್ತು. ಅದಕ್ಕೇ ನನ್ನ ಮಲದ ಕೊಡ ನಾನೇ ಚೊಕ್ಕಟ ಮಾಡ್ತೀನಿ. ನಿನಗೆ ಹೇಳಿಲ್ಲ.'

'ನಿಮ್ ಅತಿಥೀದೂ ಹಾಗೇ ಮಾಡಿ. ಸರ್ವಾಧಿಕಾರ ಚಲಾಯಿಸ್ಬೇಡಿ.'

ಗಾಂಧಿಗೆ ಸಿಟ್ಟು ನೆತ್ತಿಗೇರಿತು.

ತಾಳ್ಮೆ ತಪ್ಪಿ ಎದ್ದು ಬಂದರು.

ಕಸ್ತೂರ್‌ಬಾ ತೋಳು ಹಿಡಿದರು.

ಎಳೆದುಕೊಂಡು ಹಾಲ್‌ಗೆ ಬಂದರು.

ಹಾಲ್‌ನಲ್ಲಿ ಗುಮಾಸ್ತ ಬಂದು ನಿಂತಿದ್ದ.

ಆತನ ಎದುರೇ ಕಸ್ತೂರರನ್ನು ಎಳೆಯುತ್ತ ಬಾಗಿಲ ಬಳಿ ಬಂದು ನಿಂತು,

'ಹೋಗು, ಈತನ ಮಲದಕೊಡ ಚೊಕ್ಕಟ ಮಾಡಲ್ಲ ಅನ್ನೋದಾದ್ರೆ, ನಿನಗೆ ಈ ಮನೇಲ್ ಜಾಗ ಇಲ್ಲ. ಹೋಗು' ಎಂದು ಅಬ್ಬರಿಸಿದರು.

ಗುಮಾಸ್ತ ವಿನ್ಸೆಂಟ್ ಏನೋ ಹೇಳಲು ಹೋಗಿ 'ಸಾರ್ ಸಾರ್' ಎಂದ, ಗಾಂಧಿ 'ನೀನ್ ಸುಮ್ನಿರು' ಎಂದರು.

ತನ್ನ ಕಾರಣಕ್ಕೆ ಇಷ್ಟೆಲ್ಲ ರಗಳೆ ಆಗುತ್ತಿರುವುದು ಬೇಸರವಾಯಿತು. ಸದಾ ಸೌಮ್ಯವಾಗಿ ಕಾಣುತ್ತಿದ್ದ ಗಾಂಧಿ ಕೆಂಡದುಂಡೆಯಾಗಿದ್ದರು.

ಕಸ್ತೂರ್‌ರ ಕಣ್ಣು ನೀರ ಕೊಡವಾಗಿದ್ದವು. ಆದರೂ ಅವರು ಸುಮ್ಮನಿರಲಿಲ್ಲ, ಸಿಡಿದರು:

'ಹೆಂಡ್ತೀನ ಹೀಗ್ ಹೊರ್ಗಡೆ ದಬ್ಬೋ ನೀವು ಹೋರಾಟಗಾರರ? ಮನುಷ್ಯರ? ಪರದೇಶದಲ್ಲಿ ನನ್ ಬೀದಿಪಾಲ್ ಮಾಡ್ತೀರ? ನಿಮಗೆ ಮಾನವೀಯತೆ ಅನ್ನೋದೇನಾದ್ರು ಇದ್ಯ? ನಾನ್ ಹೇಳಿದ್ದು ನಿಜ. ನೀವು ಸಂಸಾರದ ಸರ್ವಾಧಿಕಾರಿ!'

ಕಸ್ತೂರ್‌ಬಾ ಅವರ ಕೆರಳಿದ ಕಣ್ಣೀರ ಕೆಂಡನುಡಿಗೆ ಗಾಂಧಿ ಕಂಗಾಲಾದರು. ದಿಗ್ಭ್ರಾಂತರಾಗಿ ನಿಂತರು. ಹೌದು, ತಾನು ತಪ್ಪು ಮಾಡುತ್ತಿದ್ದೇನೆ ಅನ್ನಿಸಿತು. ಕಸ್ತೂರರ ತೋಳು ಬಿಟ್ಟು ತಾವೂ ಕಣ್ತುಂಬಿ ಹೇಳಿದರು:

'ಸಾರಿ ಕಸ್ತೂರ್, ಕ್ಷಮಿಸು ನನ್ನನ್ನ, ನಾನು ಹಾಗ್ ನಡ್ಕೋಬಾರ್ದಿತ್ತು' ಎಂದು ಸಹಜವೆಂಬಂತೆ ಕೈ ಮುಗಿದರು.

ಕಸ್ತೂರ್‌ಬಾ, 'ನೀವ್ ಹೀಗೆಲ್ಲ ಕೈ ಮುಗೀಬೇಡಿ' ಎಂದರು.

'ನೋಡು ಕಸ್ತೂರ್, ನಮ್ಮ ಜಾತಿ ಪಂಡಿತರು ನನ್ನ–ನಿನ್ನ ಮಕ್ಕಳನ್ನ ಜಾತಿಯಿಂದ ಹೊರಗ್‌ಹಾಕಿದಾರೆ. ಅಂಥಾದ್ರಲ್ಲಿ ನಾವು ಅಸ್ಪೃಶ್ಯರ ಜಾತಿ ಮೂಲ ನೋಡೋದ್ ಸರ್‍ಯಲ್ಲ ಅಂತ ನಾನ್ ಸಿಟ್ಟಾದೆ.'

'ಆದ್ರೆ ನೀವ್ ಇದೆಲ್ಲ ಮೊದ್ಲೇ ಹೇಳಿ ಮನವರಿಕೆ ಮಾಡ್‌ಬೇಕಿತ್ತು. ಅದ್ರ ಬದ್ಲು ಹೊರ್ಗಡೆ ನೂಕೋದ?'

'ತಪ್ಪಾಯ್ತು ಅಂತ ಹೇಳಿದ್ನಲ್ಲ ಕಸ್ತೂರ್.'

'ಆಯ್ತು ನಾನು ಬದಲಾಗ್ತೇನೆ' ಅಂದರು ಕಸ್ತೂರ್.

'ನಾನೂ ಬದಲಾಗ್ತೇನೆ' ಅಂದರು ಗಾಂಧಿ.

'ಹೀಗೆ ತಪ್ಪು ತಿದ್ದಿಕೊಳ್ತಾನೇ ನಾವು ಬದಲಾಗಬೇಕು. ಒಳ್ಳೆ ಮನುಷ್ಯರಾಗ್ಬೇಕು.' ಎಂದು ಗಾಂಧಿ ತಮಗೆ ತಾವೇ ಹೇಳಿಕೊಂಡರು.

ಗಾಂಧಿ ಮತ್ತು ಕಸ್ತೂರ್ ಸಮಾಧಾನ ಸ್ಥಿತಿಗೆ ಬಂದಮೇಲೆ ವಿನ್ಸೆಂಟ್ ಹತ್ತಿರ ಬಂದು ಕೈಮುಗಿದು ಹೇಳಿದ:

'ಕಸ್ತೂರ್ ಮೇಡಂ, ನನ್ನಿಂದ ಇಷ್ಟೆಲ್ಲ ಆಯ್ತು. ಕ್ಷಮಿಸಿ ನನ್ನನ್ನ. ಇವತ್ತಿಂದ ನನ್ನ ಮಲದಕೊಡ ನಾನೇ ಕ್ಲೀನ್ ಮಾಡ್ತೇನೆ. ಅವರವರ ಮಲದ ಕೊಡಾನ ಅವರವ್ರೇ ಕ್ಲೀನ್ ಮಾಡಿದ್ರೆ ಸಮಸ್ಯೇನೇ ಇರೊಲ್ಲ. ಅದು ಸರೀನೂ ಹೌದು'.

ಕಸ್ತೂರರ ಮನದಲ್ಲಿ ಕಳವಳ

ಕಲ್ಲು ಬಿದ್ದ ತಾವರೆ ಕೊಳ

ಎದ್ದ ಅಲೆಗಳ ಸದ್ದು ಕಡಿಮೆಯಾಗುವವರೆಗೆ ಕಾದರು.

ಆನಂತರ ಹೇಳಿದರು:

'ಬೇಡ ನಾನೇ ಕ್ಲೀನ್ ಮಾಡ್ತೇನೆ.'

'ಅದು ನಿಮ್ ದೊಡ್ಡಗುಣ ಮೇಡಂ. ಈಗ ಸಮಸ್ಯೆ ಸಾಲ್ವ್ ಆಗಿದೆ. ನಮ್ ನಮ್ ಕೆಲ್ಸ ನಮ್ದು;